# ವರ್ತಮಾನದ ಬಳ್ಳಿಯಲ್ಲಿ ನೆನಪುಗಳ ಹೂಗಳು

**2021**ನೇ ಇಸವಿ ಫೆಬ್ರುವರಿ ತಿಂಗಳ ಕೊನೆಯ ವಾರದ ಒಂದು ದಿನ. ನಿಖರವಾಗಿ ಹೇಳಬೇಕೆಂದರೆ ಇಪ್ಪತ್ತಾರನೆಯ ತಾರೀಕು. ಮನೆಯಲ್ಲಿ ಊಟದ ಅಕ್ಕಿ ಖರ್ಚಾಗಿರದಿದ್ದರೆ ಶಿವರಾಮಯ್ಯ ಹೊರಗೆ ಅಂಗಡಿಗೆ ಹೋಗುವ ಪ್ರಮೇಯ ಬರುತ್ತಿರಲಿಲ್ಲ. ಸತ್ಯವಾದ ವಿಷಯ ಅಂದರೆ ಅಕ್ಕಿಯ ಸ್ಟಾಕು ಮಧ್ಯಾಹ್ನದ ಊಟಕ್ಕೆ ಸಾಕೂಸಾಲದಷ್ಟಿತ್ತು. ಹಿಂದಿನ ದಿನ ಹೇಳಬೇಕಾದ್ದು ಪದ್ಧತಿ. ಮರೆತುಹೋಗಿತ್ತು ಸೀತಮ್ಮನಿಗೆ. ಅವರಿಗೂ ವಯಸ್ಸಾಗಿದೆ. ಕಳೆದ ಸಂಕ್ರಾಂತಿಗೆ ಎಪ್ಪತ್ತು ತುಂಬಿ ಎಪ್ಪತ್ತೊಂದು. ವಯಸ್ಸಾಯ್ತು ಎಂದು 'ರಾಮಾ... ಕೃಷ್ಣಾ...' ಎಂದು ದೇವರ ಸ್ಮರಣೆ ಮಾಡುತ್ತಾ ಹಗೂರಕ್ಕೆ ಕಾಲ ಕಳೆಯುವಂತಿಲ್ಲ. ಹೊತ್ತಿಗೆ ಸರಿಯಾಗಿ ತಿಂಡಿ ಆಗಬೇಕು, ಅಡುಗೆ ಆಗಬೇಕು, ಮನೆಗೆಲಸ ಮುಗಿಸಬೇಕು.

ಶಿವರಾಮಯ್ಯನಿಗೆ ಹತ್ತು ಹದಿನೈದು ವರ್ಷಗಳಿಂದ ಶುಗರ್ ಕಾಯಿಲೆ ಬೆನ್ನು ಬಿದ್ದಿದೆ. ಜೊತೆಗೆ ಬಿ.ಪಿ. ಕೂಡ ಇದೆ. 'ಅದಿದ್ದಲ್ಲಿ ಇದು ಇರಲೇಬೇಕು. ಅವಳಿ ಜವಳಿ' ಎಂದು ಡಾಕ್ಟರು ತಮಾಷೆಯಾಗಿ ಹೇಳಿದ್ದರು. ಆವಾಗಿಂದ ಮಾತ್ರೆ ತಿಂದುಕೊಂಡು ಕಾಲ ಹಾಕುತ್ತಿದ್ದಾರೆ ಶಿವರಾಮಯ್ಯ. ಪಥ್ಯ–ಪಾನ ನೋಡಿಕೊಳ್ಳಬೇಕಾದ ಜವಾಬ್ದಾರಿ ಸೀತಮ್ಮನಿಗೆ. ಅಷ್ಟು ಮಾತ್ರವಲ್ಲ, ಮಾತ್ರೆ ತಿನ್ನಬೇಕಾದ್ದನ್ನು ಹೊತ್ತುಹೊತ್ತಿಗೆ ನೆನಪಿಸಬೇಕಾದ ಜವಾಬ್ದಾರಿ ಕೂಡ. ಇಲ್ಲದಿದ್ದರೆ ಮರೆತೇಬಿಡುವ ಗಿರಾಕಿ ಶಿವರಾಮಯ್ಯ. ಎಷ್ಟೋ ಸಲ ಸೀತಮ್ಮನಿಗೆ ಅನಿಸುತ್ತದೆ, ತಮ್ಮ ಕೆಲಸ ತಾವು ನೋಡಿಕೊಳ್ಳುವಷ್ಟಾದರೂ ಈ ಮನುಷ್ಯನಿಗೆ ವಿವೇಕ ಇರಬೇಕಿತ್ತು. 'ಇದಾಳೆ ಹೆಂಡತಿ, ನೋಡಿಕೊಳ್ಳುತ್ತಾಳೆ. ಅದು ಅವಳ ಕರ್ತವ್ಯ' ಎನ್ನುವಂತಾ ಧೋರಣೆ. ಮನೆಕೆಲಸದ ಜನ ಆದರೂ ಎಷ್ಟೋ ವಾಸಿ. ಮಾಡುವ ಕೆಲಸಕ್ಕೆ ಸಿಕ್ಕುತ್ತದೆ ಸಂಬಳ. ಹೆಂಡತಿಗೆ? ಬರೀ ಗೊರಟು. ಕೊನೆಗೆ ಬಾಯಿಮಾತಿನ ಕೃತಜ್ಞತೆ ಕೂಡ ಇಲ್ಲ. ಹೊಟ್ಟೆಗೆ ಅನ್ನ, ವರ್ಷಕ್ಕೆರಡು ಜಡ್ಡು ಸೀರೆ ಕೊಡಿಸಿದರೆ 'ಮಹಾ ಉಪಕಾರವಾಯ್ತು' ಎನ್ನುವಂಥ ವರ್ತನೆ. ಅಡುಗೆ ಚೆನ್ನಾಗಿದ್ದರೆ 'ಇವತ್ತು ಮ್ಯಾಲಾಗ್ರ ಲಾಯ್ಕುಂಟು ಕಣೇ...' ಎನ್ನುವ ಒಂದು ಒಳ್ಳೆಯ ಮಾತಿಲ್ಲ. ಅದೇ ಚೆನ್ನಾಗಿಲ್ಲದಿದ್ದರೆ 'ಚೆನ್ನಾಗಿಲ್ಲ' ಎನ್ನುವುದಕ್ಕೆ ಮುಲಾಜೇ ಇಲ್ಲ. ಒಂದೊಂದು ಸಲ ಚೂರು ಉಪ್ಪು ಮುಂದಾಗುತ್ತದೆ. ಒಂದೊಂದು ಸಲ ಕಾರ.

ಎಂಬತ್ತರ ಹತ್ತಿರ ಬಂತು ಗಂಡನಿಗೆ. ನಾಲಿಗೆ ರುಚಿ ಕಮ್ಮಿಯಾಗುವುದು ಸಹಜ. ಅದನ್ನು ಅರ್ಥ ಮಾಡಿಕೊಳ್ಳುವುದಿಲ್ಲ. ಹದ ಹೇಳಲು ಶುರು ಮಾಡಿಬಿಡುತ್ತಾರೆ. 'ಅಕ್ಕಿ ಬುಡ ಹತ್ತ ಖರ್ಚಾಗಿದೆ' ಎಂದು ಗಂಡನ ಹತ್ತಿರ ಹೇಳುವುದಕ್ಕೂ ದಿಗಿಲು ಸೀತಮ್ಮನಿಗೆ.

'ನಿನ್ನೇನೇ ಹೇಳೋಕೆ ಏನಾಗಿತ್ತು ಧಾಡಿ? ಅನ್ನದ ಚರಿಗೆ ಒಲೇ ಮೇಲೆ ಇಟ್ಗಂಡು ಅಕ್ಕಿ ಇಲ್ಲ ಅಂತ ತಾರಮ್ಮಯ್ಯ ಮಾಡಿದ್ರೆ ಮುಗೀತು ನಿನ್ನ ಕೆಲಸ. ಈ ಉರಿಬಿಸ್ಲಲ್ಲಿ ಅಕ್ಕಿ ಹೊತ್ಗಂಡು ಬರೋ ಅಷ್ಟ್ರಲ್ಲಿ ನನ್ನ ಹೆಣ ಬೀಳುತ್ತೆ...' ಇಂಥಾದ್ದೇ ಅಪಶಕುನದ ಮಾತು. ಅವರು ಬಾಯಿ ಬಿಡುವುದಕ್ಕೆ ಮುಂಚೆಯೇ ಇಂತಿಂಥಾ ಮಾತಾಡಿಬಿಡುತ್ತಾರೆ ಎಂದು ಕರಾರುವಾಕ್ಕಾಗಿ ಹೇಳಿಬಿಡುತ್ತಾರೆ

